ಚಾಮರಾಜನಗರ ಜಿಲ್ಲಾ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 226(595)

ಸದಸ್ಯರ ಹೆಸರು: ಶ್ರೀ ಗುರುಸ್ವಾಮಿ ಸಿ.(ಚಾಮರಾಜನಗರ)

ಉತ್ತರಿಸುವ ಸಚಿವರು: ಡಾ॥ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರಿಂದ 'ಡಿ' ಗ್ರೂಪ್ ನೌಕರರವರೆಗೆ ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ನೀಡುವುದು.

ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಇ) ಆಸ್ಪತ್ರೆಯಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಯಾವಾಗ ನೇಮಕಾತಿ ಮಾಡಲಾಗುವುದು?

ಉತ್ತರ

ಅ)

	ಮಂಜೂರಾದ ಹುದ್ದೆ	ಖಾಲಿ ಹುದ್ದೆ
ವೈದ್ಯಾಧಿಕಾರಿ	08	01
ಇತರೆ ಸಿಬ್ಬಂದಿ	79	41

ಆ) ಖಾಲಿ ಇರುವ ಒಂದು ತಜ್ಞ ವೈದ್ಯರ ಹುದ್ದೆಯನ್ನು ವರ್ಗಾವಣೆ ಮೂಲಕ ತುಂಬಲಾಗುವುದು. ಇತರೆ ಹುದ್ದೆಗಳ ಪೈಕಿ ಕೆಲವು ಹುದ್ದೆಗಳನ್ನು ಪದೋನ್ನತಿ ಮೂಲಕ ತುಂಬಲಾಗುವುದು. ಮತ್ತು ಉಳಿದ ಇತರ ಹುದ್ದೆಗಳನ್ನು ಸಿಬ್ಬಂದಿಯ ನೇರ ನೇಮಕಾತಿ ಮೂಲಕ ತುಂಬಲಾಗುವುದು. ನೇರ ನೇಮಕಾತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಡಿ ದರ್ಜೆ ಹುದ್ದೆಗಳಿಗೆ ಅನುಕಂಪಾಧಾರಿತ ನೇಮಕಾತಿಗಳನ್ನು ಮಾಡಲಾಗುತ್ತಿದೆ.